<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ</u>

<u>ಸಿಸಿ ನಂ**. 234/2019**</u>

ಚಾಸಾ-1 ಪ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 07-03-2026

| | | |
|---|---|---|
| ಹೆಸರು | : | ಸಂತೋಷ |
| ತಂದೆಯ ಹೆಸರು | : | ಶಂಕರ ರಾಠೋಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | Police Inspector ಲೋಕಾಯುಕ್ತ |
| ವಾಸಸ್ಥಳ | : | ಬೀದರ |

-: <u>ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-</u>

ದಿನಾಂಕಃ 20-10-2017 ರಿಂದ 01-11-2018 ರವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಉಪನಿರೀಕ್ಷಕನಾಗಿ ಕಾರ್ಯನಿರ್ವಹಿಸಿರುತ್ತೇನೆ.

ದಿಃ 21-10-2017 ರಂದು ಬೆಳಿಗ್ಗೆ 9 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಕಲಬುರಗಿ ರಸ್ತೆಗೆ ಇರುವ ನೀರಾವರಿ ಕಚೇರಿ ಹತ್ತಿರ ಒಬ್ಬ ವ್ಯಕ್ತಿ ಪಿಸ್ತೂಲ ಹಿಡಿದುಕೊಂಡು ನಿಂತಿರುವ ಬಗ್ಗೆ ಖಚಿತ ಭಾತ್ಮಿ ಬಂದ ಮೇರೆಗೆ, ಚಾಸಾ 4 ರಿಂದ 6 ರವರು ಮತ್ತು ಪಂಚರಾದ ಶಿವಪ್ಪ, ಸೊಂದಪ್ಪ ರವರಿಗೆ ಬರಮಾಡಿಕೊಂಡು, 9-15 ಕ್ಕೆ ಠಾಣೆಯಿಂದ ಹೊರಟು, ಸುಮಾರು 9-25 ಕ್ಕೆ ನಾವು ಭಾತ್ಮಿ ಸ್ಥಳಕ್ಕೆ ಹೋಗಿದ್ದು ಆಗ ಒಬ್ಬ ವ್ಯಕ್ತಿ ನಮ್ಮ ವಾಹನ ನೋಡಿ ಓಡಿಹೋಗಲು ಪ್ರಯತ್ನಿಸಿದನು. ಆಗ ನಾನು ಸಿಬ್ಬಂದಿ ಸೇರಿ ಆತನಿಗೆ ಹಿಡಿದು ಆತನ ಹೆಸರು ವಿಚಾರಿಸಲಾಗಿ ಆತನು ತನ್ನ ಹೆಸರು ಕಿಟ್ಯಾ@ ಕ್ರಿಸ್ಟೋಫರ ತಂ. ಸುರೇಶ, ಸಾ. ಕಮಲಿಬಾಬಾ ದರ್ಗಾ ಹತ್ತಿರ ವಾಡಿ ಎಂದು ತಿಳಿಸಿರುತ್ತೇನೆ. ಆತನ ಸೊಂಟದಲ್ಲಿದ್ದ

ಪಿಸ್ತೂಲನ್ನು ತೆಗೆದು ಪರಿಶೀರಿಸಿ ಆ ಕುರಿತು ಆತನಿಗೆ ಪರವಾನಿಗೆ ಕುರಿತು ವಿಚಾರಿಸಿದಾಗ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾನೆ. ಸದರಿ ಪಿಸ್ತೂಲ ನೋಡಿದಾಗ 3 ಜೀವಂತ ಗುಂಡುಗಳು ಇದ್ದವು. ಬೆಳಿಗ್ಗೆ 9-45 ರಿಂದ 10-45 ರವರೆಗೆ ಪಂಚರ ಸಮಕ್ಷಮ ಸ್ಥಳದಲ್ಲಿ ಜಪ್ತಿ ಪಂಚನಾಮೆ ಬರೆದು ಪಿಸ್ತೂಲನ್ನು ಜಪ್ತಿ ಪಡಿಸಿಕೊಂಡಿರುತ್ತೇನೆ. ಸದರಿ ಪಿಸ್ತೂಲಿನ ಮೇಲೆ ನಾನು ಮತ್ತು ಪಂಚರು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿರುತ್ತೇನೆ. ನಂತರ ಆರೋಪಿ, ಮುದ್ದೆಮಾಲಿನೊಂದಿಗೆ ಠಾಣೆಗೆ ಹಾಜರಾಗಿ ಆರೋಪಿ ವಿರುದ್ಧ ದೂರು ಚಾಸಾ 12 ರವರಿಗೆ ನೀಡಿರುತ್ತೇನೆ.

ದಿಃ 24-11-2017 ರಂದು ಚಾಸಾ 12 ರವರಿಂದ ಮುಂದಿನ ತನಿಖೆಗಾಗಿ ಕಡತವನ್ನು ಸ್ವೀಕರಿಸಿರುತ್ತೇನೆ. ಅದೇ ದಿನ ಚಾಸಾ 8 ರವರಿಗೆ ನಿಯೋಜಿಸಿ ಜಪ್ತಿ ಪಡಿಸಿಕೊಂಡ ಪಿಸ್ತೂಲನ್ನು ಪರೀಕ್ಷೆಗಾಗಿ FSL ಗೆ ಕಳುಹಿಸಿಕೊಟ್ಟಿರುತ್ತೇನೆ. ಮತ್ತು FSL ಗೆ ನೀಡಿದ ವರದಿ ಆತನಿಂದ ಪಡೆದಿರುತ್ತೇನೆ. ದಿಃ 20-05-2018 ರಂದು ಚಾಸಾ 9 ರವರು FSL ವರದಿ ತೆಗೆದುಕೊಂಡು ಬಂದಿರುತ್ತಾರೆ. ಸದರಿ ವರದಿ ಆತನಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 28-08-2018 ರಂದು ಸದರಿ ಮುದ್ದೆಮಾಲನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ಹಾಜರುಪಡಿಸಿ ಅಭಿಯೋಜನೆಗೆ ಪರವಾನಿಗೆ ಕೋರಿರುತ್ತೇನೆ. ಜಿಲ್ಲಾಧಿಕಾರಿಗಗೆ ಸಲ್ಲಿಸಿದ ಮುದ್ದೆಮಾಲಿನ ಭಾವಚಿತ್ರ ವನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ನೀಡಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**2** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಚಾಸಾ 8 ರವರು ನೀಡಿದ ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**3** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಚಾಸಾ 9 ರವರು ನೀಡಿದ ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**4** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**4**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ FSL ವರದಿ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗ ನಿಪಿ-**5** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**5**(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದ ಮುದ್ದೆಮಾಲಿನ ಭಾವಚಿತ್ರಗಳನ್ನು ತೋರಿಸಿದ್ದು ಸಾಕ್ಷಿಯೂ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗ ನಿಪಿ **6** ರಿಂದ **11** ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಬಿಳಿ ಚೀಲದಲ್ಲಿರುವ ಒಂದು ಸೀಲು ಮಾಡಿದ ನಾಡ ಪಿಸ್ತೂಲನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗ ಮು.ಮಾ. **1** ಎಂದು ಗುರುತಿಸಲಾಯಿತು.

ಅದರಂತೆ ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಬಿಳಿ ಚೀಲದಲ್ಲಿರುವ ಸೀಲು ಮಾಡಿದ ಮೂರು ಗುಂಡುಗಳ ಮುಚ್ಚಳ ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಈಗ ಮು.ಮಾ. **2** ಎಂದು ಗುರುತಿಸಲಾಯಿತು.

ಆರೋಪಿತನನ್ನು ನೋಡಿದಲ್ಲಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-</u>

ಅಫಜಲಪುರದಿಂದ ನೀರಾವರಿ ಕಚೇರಿ 2-3 ಕಿ.ಮಿ. ದೂರದಲ್ಲಿದೆ ಎಂದರೆ ಸರಿ. ನೀರಾವರಿ ಕಚೇರಿ ಹತ್ತಿರ ಕಚೇರಿ ಮುಂದೆ ದಕ್ಷಿಣಕ್ಕೆ ಪದಕಿ ಶಾಲೆ, ಪೂರ್ವ ಪಶ್ಚಿಮ ಕಲಬುರಗಿ ಅಫಜಲಪುರ ರಸ್ತೆ ಇರುತ್ತದೆ ಎಂದರೆ ಸರಿ. ನಮ್ಮನ್ನು ನೋಡಿ ಆರೋನಿಪಿತನು ಕಚೇರಿ ಮುಂದಿನಿಂದ ಓಡಲು ಪ್ರಾರಂಭಿಸಿದನು. ನೀರಾವರಿ ಕಚೇರಿ ಅಕ್ಕಪಕ್ಕ ಹೋಟೆಲ ಧಾಬಾ ಇರುತ್ತವೆ ಎಂದರೆ ಸರಿ. ನೀರಾವರಿ ಕಚೇರಿ ಹತ್ತಿರ ಬಸ ನಿಲುಗಡೆ ತಾಣ ಇರುತ್ತದೆ ಎಂದರೆ ಸರಿ. ನಾವು ಹೋದಾಗ ಜನರು ಇರುವುದನ್ನು ಅಷ್ಟು ಗಮನಿಸಿಲ್ಲ. ಆರೋಪಿತನನ್ನು ಬೆನ್ನಟ್ಟಿರುತ್ತೇವೆ. ಆರೋಪಿ ಯಾವ ದಿಕ್ಕಿಗೆ ಓಡುತ್ತಿದ್ದನು ಎಂದು ಈಗ ನೆನಪಿಲ್ಲ. ಆರೋಪಿ ಓಡಲು ಪ್ರಾರಂಭಿಸಿದ ಸ್ಥಳದಿಂದ 100 ಮೀಟರ ಒಳಗಡೆ ಹಿಡಿದಿರುತ್ತೇವೆ,

ನಾನು ಸಿಬ್ಬಂದಿ ಪಂಚರು ಸೇರಿ ಆರೋಪಿತನ ಮೇಲೆ ದಾಳಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿ ಬಳಿ ಪಿಸ್ತೂಲ ಮತ್ತು ಜೀವಂತ ಗುಂಡುಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಪಂಚರ ಸಮಕ್ಷಮ ಮುದ್ದೆಮಾಲು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿತನಿಗೆ ಆಗದವರ ಮಾತುಕೇಳಿ ಆರೋಪಿ ವಿರುದ್ಧ ಸುಳ್ಳು ದೂರು ನೀಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ.

ದಿಃ 24-11-2017 ರಂದು ಚಾಸಾ 12 ರವರಿಂದ ಮುಂದಿನ ತನಿಖೆಗಾಗಿ ಕಡತವನ್ನು ಸ್ವೀಕರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಅದೇ ದಿನ ಚಾಸಾ 8 ರವರಿಗೆ ನಿಯೋಜಿಸಿ ಜಪ್ತಿ ಪಡಿಸಿಕೊಂಡ ಪಿಸ್ತೂಲನ್ನು ಪರೀಕ್ಷೆಗಾಗಿ FSL ಗೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಮತ್ತು FSL ಗೆ ನೀಡಿದ ವರದಿ ಆತನಿಂದ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ದಿಃ 20-05-2018 ರಂದು ಚಾಸಾ 9 ರವರು FSL ವರದಿ ತೆಗೆದುಕೊಂಡು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಸದರಿ ವರದಿ ಆತನಿಂದ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ.

ದಿಃ 28-08-2018 ರಂದು ಸದರಿ ಮುದ್ದೆಮಾಲನ್ನು ಮಾನ್ಯ ಜಿಲ್ಲಾಧಿಕಾರಿಗಳ ಮುಂದೆ ಹಾಜರುಪಡಿಸಿ ಅಭಿಯೋಜನೆಗೆ ಪರವಾನಿಗೆ ಕೋರಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿಗೂ ಮುದ್ದೆಮಾಲಿಗೂ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

ನನ್ನ ತನಿಖೆ ವೇಳೆಯಲ್ಲಿ ಸ್ಥಳೀಯರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ